# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
# <u>ಅಫಜಲಪೂರ</u>

ಸಿಸಿ ನಂ.07/2015

ಚಾಸಾ-4 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 04.02.2019

| | | |
|---|---|---|
| ಹೆಸರು | ಃ | ಪ್ರಕಾಶ ಮೈದರಗಿ |
| ತಂದೆ ಹೆಸರು | ಃ | ವೀರಭದ್ರಪ್ಪ |
| ವಯಸ್ಸು | ಃ | 32-ವರ್ಷ |
| ಉದ್ಯೋಗ | ಃ | ಪಿಸಿ-1672 ಝಳಕಿ ಠಾಣೆ |
| ವಾಸಸ್ಥಳ | ಃ | ಝಳಕಿ ತಾ. ಇಂಡಿ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2008 ರಿಂದ 2013 ರವರೆಗೆ ದೇವಲಗಾಣಗಾಪೂರ ಠಾಣೆಯಲ್ಲಿ ಪಿಸಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 17.05.2010 ರಂದು ಅಫಜಲಪೂರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಸಲುವಾಗಿ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯ ದ್ವಾರದ ಗೇಟನ ಹತ್ತಿರ ಚಾಸಾ-1 ರವರ ಜೊತೆಗೆ ನನಗೆ ಮತ್ತು ಚಾಸಾ-5 ರಿಂದ 15 ರವರು ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ.

ಮುಂಜಾನೆ 8.30 ಗಂಟೆಗೆ ಮತ ಎಣಿಕೆ ಮಾಹಿತಿ ಧ್ವನಿವರ್ಧಕದ ಮೂಲಕ ಸರಿಯಾಗಿ ಕೇಳುತ್ತಿಲ್ಲ ಎಂದು ಸಾಕಷ್ಟು ಜನ ಮತ ಎಣಿಕೆ ಕೇಂದ್ರಕ್ಕೆ ನುಗ್ಗಲು ಪ್ರಯತ್ನಿಸಿದಾಗ ಹೊರಗಿನಿಂದ ಬೀಸಿ ಹೊಡೆದ ಕಲ್ಲು ಚಾಸಾ-1 ರವರ ತಲೆಯ ಹಿಂಭಾಗದಲ್ಲಿ, ಚಾಸಾ-5 ರವರ ಬೆನ್ನಿಗೆ, ನನ್ನ ಬಲ ಗಲ್ಲಕ್ಕೆ ಬಡೆದಿದ್ದು, ಏ ಬೋಸಡಿ ಮಕ್ಕಳೆ ಗೇಟ್ ತೆಗಿರಿ ನಾವು ಒಳಗಡೆ ಹೋಗಬೇಕು ಎಂದು ಅವಾಚ್ಯ ಶಬ್ದಗಳಿಂದ ಕೂಡ ಬೈದಾಡುತ್ತಿದ್ದರು. ಘಟನೆ ಸಮಯದಲ್ಲಿ ಸಾಕಷ್ಟು ಜನರು ಸೇರಿದ್ದರಿಂದ ಯಾರು ಕಲ್ಲು ಒಗೆದಿರುತ್ತಾರೆಂದು ಗುರುತಿಸಲು ಆಗಲಿಲ್ಲ, ಆದರೆ ಸದರಿ

ಗಲಾಟೆಯಲ್ಲಿ ಆರೋಪಿತರೂ ಕೂಡ ಹಾಜರಿದ್ದರು. ಆನಂತರ ಪೋಲಿಸ್ ಬಾತ್ಮಿದಾರರಿಂದ ಆರೋಪಿತರ ಹೆಸರು ವಿಳಾಸಗಳನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಸಾಕ್ಷಿ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಮೂಲ ಪ್ರಕರಣದಲ್ಲಿ ಅವುಗಳನ್ನು ಈಗಾಗಲೇ ಎಂ.ಓ-1 ರಿಂದ 4 ಎಂದು ಗುರುತಿಸಲಾಗಿದೆ. ಘಟನೆಯಾದ ನಂತರ ನನ್ನನ್ನು ಹಾಗೂ ಚಾಸಾ-1, ಮತ್ತು 5 ರವರನ್ನು ಅಫಜಲಪೂರ ಸರಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಈ ಕುರಿತು ಚಾಸಾ-1 ಪ್ರಕರಣ ದಾಖಲಿಸಿದ್ದು, ಘಟನೆ ಕುರಿತು ಹೇಳಿಕೆ ಹಾಗೂ ಪುರವಣಿ ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ಮತ ಎಣಿಕೆ ಸ್ಥಳದಿಂದ ಸಾರ್ವಜನಿಕರು 200 ಮೀಟರ್ ಅಂತರ ಕಾಯ್ದುಕೊಳ್ಳುವ ನಿಬಂಧನೆ ಹೇರಲಾಗಿತ್ತು. ಶಾಲೆಯ ಮುಂಭಾಗದ ಅಫಜಲಪೂರ - ದುದನಿ ರಸ್ತೆ ಮೇಲೆ ಬಸವೇಶ್ವರ ವೃತ್ತದಿಂದ 200 ಮೀಟರ್ ಅಂತರ ಕಾಯ್ದುಕೊಳ್ಳಲು ತಿಳಿಸಲಾಗಿತ್ತು. ಘಟನೆ ದಿವಸ ಶಾಲೆಯ ಮುಂಭಾಗದಲ್ಲಿರುವ ಅಂಗಡಿಗಳು ಮುಚ್ಚಿದ್ದವು. ಶಾಲೆಯ ಮುಂಭಾಗದ ಹೊರಭಾಗದ ಗೇಟಿನಲ್ಲಿ ಒಳ ಬರುವ ಜನರ ತಪಾಸಣೆ ಸಲುವಾಗಿ ನಿಂತಿದ್ದೆವು. ಮತ ಎಣಿಕೆ ಸಲುವಾಗಿ ಬೇರೆ ಇಲಾಖೆ ಸಿಬ್ಬಂದಿ ಕೂಡ ನೇಮಿಸಲಾಗಿತ್ತು. ಸದರಿ ಸಿಬ್ಬಂದಿಯವರ ಹೆಸರು ವಿಳಾಸ ಗೊತ್ತಿಲ್ಲ. 200 ಮೀಟರ್ ಪ್ರಾರಂಭವಾಗುವ ಸ್ಥಳದಲ್ಲಿ ಕೂಡ ಸಿಬ್ಬಂದಿ ನೇಮಕವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಬಸವೇಶ್ವರ ವೃತ್ತ ಯಾವಾಗಲು ಜನಸಂದಣಿ ಸ್ಥಳವಿರುವುದರಿಂದ ಅಲ್ಲಿ ಪೋಲಿಸ್ ಖಾಯಂ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಳ್ಳಿಗಳಿಗೆ ಹೋಗುವ ಖಾಸಗಿ ವಾಹನಗಳೂ ಸಹ ವೃತ್ತದ ಹತ್ತಿರ ನಿಂತಿರುತ್ತವೆ. ಘಟನೆ ದಿವಸ ಅಂದಾಜು 100-200 ಜನ ಸೇರಿದ್ದರೆ ಎಂಬ ಪ್ರಶ್ನೆಗೆ ಸಾಕಷ್ಟು ಜನರಿದ್ದರು ಆದರೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಕಲ್ಲುಗಳನ್ನು ಯಾರು ಬೀಸಿರುತ್ತಾರೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ ಆರೋಪಿತರ ಗುಂಪಿನಿಂದ ಕಲ್ಲು ಬೀಸಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ರಾಜಕೀಯ ಹಿನ್ನೆಲೆಯಿಂದ ಆರೋಪಿತರೇ ಗಲಾಟೆ ಮಾಡಿ ಕಲ್ಲು ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

ಘಟನೆ ದಿವಸ ಆರೋಪಿತರೆಲ್ಲರೂ ಹಾಜರಿದ್ದರು ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಮತ ಎಣಿಕೆ ವಿವರ ಸರಿಯಾಗಿ ಕೇಳುತ್ತಿಲ್ಲ ಎಂದು ಆರೋಪಿತರು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಚಾಸಾ-1 ನಮ್ಮ ಮೇಲಾಧಿಕಾರಿ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
## ಅಫಜಲಪೂರ

ಸಿಸಿ ನಂ.07/2015

ಚಾಸಾ-5 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 04.02.2019

| | | |
|---|---|---|
| ಹೆಸರು | ಃ | ನಾಗರಾಜ ಮಾಡಿಯಾಳ |
| ತಂದೆ ಹೆಸರು | ಃ | ಶರಣಪ್ಪ |
| ವಯಸ್ಸು | ಃ | 35-ವರ್ಷ |
| ಉದ್ಯೋಗ | ಃ | ಹೆಚ್‌ಸಿ-386 ರೋಜಾ ಪೋಲಿಸ್ ಠಾಣೆ |
| ವಾಸಸ್ಥಳ | ಃ | ಕಲಬುರಗಿ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ದಿನಾಂಕ 25.01.2008 ರಿಂದ 2014 ರವರೆಗೆ ದೇವಲಗಾಣಗಾಪೂರ ಠಾಣೆಯಲ್ಲಿ ಪಿಸಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 17.05.2010 ರಂದು ಅಫಜಲಪೂರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಸಲುವಾಗಿ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯ ದ್ವಾರದ ಗೇಟನ ಹತ್ತಿರ ಚಾಸಾ-1 ರವರ ಜೊತೆಗೆ ನನಗೆ ಮತ್ತು ಚಾಸಾ-4, 6 ರಿಂದ 15 ರವರು ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ.

ಮುಂಜಾನೆ 8.30 ಗಂಟೆಗೆ ಮತ ಎಣಿಕೆ ಮಾಹಿತಿ ಧ್ವನಿವರ್ಧಕದ ಮೂಲಕ ಸರಿಯಾಗಿ ಕೇಳುತ್ತಿಲ್ಲ ಎಂದು ಸಾಕಷ್ಟು ಜನ ಮತ ಎಣಿಕೆ ಕೇಂದ್ರಕ್ಕೆ ನುಗ್ಗಲು ಪ್ರಯತ್ನಿಸಿದಾಗ ಹೊರಗಿನಿಂದ ಬೀಸಿ ಹೊಡೆದ ಕಲ್ಲು ಚಾಸಾ-1 ರವರ ತಲೆಯ ಹಿಂಭಾಗದಲ್ಲಿ, ನನ್ನ ಬೆನ್ನಿಗೆ, ಚಾಸಾ-4 ರವರ ಬಲ ಗಲ್ಲಕ್ಕೆ ಬಡೆದಿದ್ದು, ಏ ಬೋಸಡಿ ಮಕ್ಕಳೆ ಗೇಟ್ ತೆಗಿರಿ ನಾವು ಒಳಗಡೆ ಹೋಗಬೇಕು ಎಂದು ಅವಾಚ್ಯ ಶಬ್ದಗಳಿಂದ ಕೂಡ ಬೈದಾಡುತ್ತಿದ್ದರು. ಘಟನೆ ಸಮಯದಲ್ಲಿ ಸಾಕಷ್ಟು ಜನರು ಸೇರಿದ್ದರಿಂದ ಯಾರು ಕಲ್ಲು ಒಗೆದಿರುತ್ತಾರೆಂದು ಗುರುತಿಸಲು ಆಗಲಿಲ್ಲ, ಆದರೆ ಸದರಿ ಗಲಾಟೆಯಲ್ಲಿ ಆರೋಪಿತರೂ ಕೂಡ ಹಾಜರಿದ್ದರು. ಆನಂತರ ಪೋಲಿಸ್ ಬಾತ್ಮಿದಾರರಿಂದ ಆರೋಪಿತರ ಹೆಸರು ವಿಳಾಸಗಳನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಸಾಕ್ಷಿ

ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮೂಲ ಪ್ರಕರಣದಲ್ಲಿ ಈಗಾಗಲೇ ಎಂ.ಓ-1 ರಿಂದ 4 ಎಂದು ಗುರುತಿಸಲಾಗಿದೆ. ಘಟನೆಯಾದ ನಂತರ ನನ್ನನ್ನು ಹಾಗೂ ಚಾಸಾ-1, ಮತ್ತು 4 ರವರನ್ನು ಅಫಜಲಪೂರ ಸರಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಈ ಕುರಿತು ಚಾಸಾ-1 ಪ್ರಕರಣ ದಾಖಲಿಸಿದ್ದು, ಘಟನೆ ಕುರಿತು ಹೇಳಿಕೆ ಹಾಗೂ ಪುರವಣಿ ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ಅಂದಾಜು 10-12 ಜನ ಘಟನೆ ದಿವಸ ಬಂದೋಬಸ್ತ ಸಲುವಾಗಿ ಗೇಟಿನ ಮುಂಭಾಗದಲ್ಲಿ ನಿಂತಿದ್ದೆವು. ನಮ್ಮ ಸಿಬ್ಬಂದಿ ಹೊರತುಪಡಿಸಿ ಚುನಾವಣೆಗೆ ನೇಮಿಸಿದ ಉಳಿದ ಇಲಾಖೆ ಸಿಬ್ಬಂದಿ ಜನರು ಗೇಟಿನ ಮುಂಭಾಗದಲ್ಲಿರಲಿಲ್ಲ. ಮತ ಎಣಿಕೆ ಸ್ಥಳದಿಂದ ಸಾರ್ವಜನಿಕರು 200 ಮೀಟರ್ ಅಂತರ ಕಾಯ್ದುಕೊಳ್ಳುವ ನಿಬಂಧನೆ ಹೇರಲಾಗಿತ್ತು. ಶಾಲೆಯ ಮುಂಭಾಗದ ಅಫಜಲಪೂರ - ದುದನಿ ರಸ್ತೆ ಮೇಲೆ ಬಸವೇಶ್ವರ ವೃತ್ತದಿಂದ 200 ಮೀಟರ್ ಅಂತರ ಕಾಯ್ದುಕೊಳ್ಳಲು ತಿಳಿಸಲಾಗಿತ್ತು. ಘಟನೆ ದಿವಸ ಶಾಲೆಯ ಮುಂಭಾಗದಲ್ಲಿರುವ ಅಂಗಡಿಗಳು ಮುಚ್ಚಿದ್ದವು. ಶಾಲೆಯ ಮುಂಭಾಗದ ಹೊರಭಾಗದ ಗೇಟಿನಲ್ಲಿ ಒಳ ಬರುವ ಜನರ ತಪಾಸಣೆ ಸಲುವಾಗಿ ನಿಂತಿದ್ದೆವು. ಮತ ಎಣಿಕೆ ಸಲುವಾಗಿ ಬೇರೆ ಇಲಾಖೆ ಸಿಬ್ಬಂದಿ ಕೂಡ ನೇಮಿಸಲಾಗಿತ್ತು. ಮತ ಎಣಿಕೆ ಮುಂಭಾಗ ಮುಖ್ಯ ರಸ್ತೆಯಿದ್ದು ಸಾಕಷ್ಟು ವಾಹನಗಳು ಓಡಾಡುತ್ತಿದ್ದವು. ಘಟನೆ ದಿವಸ ಅಂದಾಜು 40-50 ಜನ ಸೇರಿದ್ದರು. ಘಟನೆ ದಿವಸ ಧ್ವನಿವರ್ಧಕ ಸರಿಯಾಗಿ ಕೇಳುತ್ತಿಲ್ಲವೆಂದು ಆರೋಪಿತರು ಜಗಳ ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿತರ ಗುಂಪಿನಿಂದ ಕಲ್ಲು ಬೀಸಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ರಾಜಕೀಯ ಹಿನ್ನೆಲೆಯಿಂದ ಆರೋಪಿತರೇ ಗಲಾಟೆ ಮಾಡಿ ಕಲ್ಲು ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

ಘಟನೆ ದಿವಸ ಆರೋಪಿತರೆಲ್ಲರೂ ಹಾಜರಿದ್ದರು ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಮತ ಎಣಿಕೆ ವಿವರ ಸರಿಯಾಗಿ ಕೇಳುತ್ತಿಲ್ಲ ಎಂದು ಆರೋಪಿತರು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಚಾಸಾ-1

ನಮ್ಮ ಮೇಲಾಧಿಕಾರಿ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**
**ಅಫಜಲಪೂರ**

ಸಿಸಿ ನಂ.07/2015

ಚಾಸಾ-7 ಪ್ರಾಸಾ-4

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 04.02.2019

| | | |
|---|---|---|
| ಹೆಸರು | ಃ | ಸಂಜಯ ಪಾಟೀಲ |
| ತಂದೆ ಹೆಸರು | ಃ | ಸುಭಾಶ್ಚಂದ್ರ |
| ವಯಸ್ಸು | ಃ | 32-ವರ್ಷ |
| ಉದ್ಯೋಗ | ಃ | ಪಿಸಿ-1085, ಎಪಿಎಂಸಿ ಠಾಣೆ |
| ವಾಸಸ್ಥಳ | ಃ | ವಿಜಯಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ದಿನಾಂಕ 01.05.2008 ರಿಂದ ಅಗಷ್ಟ-2012 ರವರೆಗೆ ದೇವಲಗಾಣಗಾಪೂರ ಠಾಣೆಯಲ್ಲಿ ಪಿಸಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 17.05.2010 ರಂದು ಅಫಜಲುಪೂರ ತಾಲೂಕಿನ ಗ್ರಾ.ಪಂ. ಗಳ ಮತ ಎಣಿಕೆ ಬಂದೋಬಸ್ತ ಸಲುವಾಗಿ ಅಫಜಲಪೂರ ಪಟ್ಟಣದಲ್ಲಿರುವ ಮಹಾಂತೇಶ್ವರ ವಿದ್ಯಾವರ್ಧಕ ಕಾಲೇಜಿನಲ್ಲಿ ಮತ ಎಣಿಕೆ ಬಂದೋಬಸ್ತ ಕರ್ತವ್ಯಕ್ಕೆ ಸದರಿ ಕಾಲೇಜಿನ ಮುಖ್ಯ ದ್ವಾರದ ಗೇಟನ ಹತ್ತಿರ ಚಾಸಾ-1 ರವರ ಜೊತೆ ನಾನು ಹಾಗೂ ಇನ್ನೂ 8-ಜನ ಸಿಬ್ಬಂದಿಗಳು ಬಂದೋಬಸ್ತ ಕರ್ತವ್ಯಕ್ಕೆ ಹಾಜರಾಗಿರುತ್ತೇವೆ.

ಮುಂಜಾನೆ 8.30 ಗಂಟೆಗೆ ಮತ ಎಣಿಕೆ ಮಾಹಿತಿ ಧ್ವನಿವರ್ಧಕದ ಮೂಲಕ ಸರಿಯಾಗಿ ಕೇಳುತ್ತಿಲ್ಲ ಎಂದು ಸಾಕಷ್ಟು ಜನ ಮತ ಎಣಿಕೆ ಕೇಂದ್ರಕ್ಕೆ ನುಗ್ಗಲು ಪ್ರಯತ್ನಿಸಿದಾಗ ಹೊರಗಿನಿಂದ ಬೀಸಿ ಹೊಡೆದ ಕಲ್ಲು ಚಾಸಾ-1 ರವರ ತಲೆಯ ಹಿಂಭಾಗದಲ್ಲಿ, ಚಾಸಾ-5 ರವರ ಬೆನ್ನಿಗೆ, ಚಾಸಾ-4 ರವರ ಗಲ್ಲಕ್ಕೆ ಬಡೆದಿದ್ದು, ಏ ಬೋಸಡಿ ಮಕ್ಕಳೆ ಗೇಟ್ ತೆಗಿರಿ ನಾವು ಒಳಗಡೆ ಹೋಗಬೇಕು ಎಂದು ಅವಾಚ್ಯ ಶಬ್ದಗಳಿಂದ ಕೂಡ ಬೈದಾಡುತ್ತಿದ್ದರು. ಘಟನೆ ಸಮಯದಲ್ಲಿ ಸಾಕಷ್ಟು ಜನರು ಸೇರಿದ್ದರಿಂದ ಯಾರು ಕಲ್ಲು ಒಗೆದಿರುತ್ತಾರೆಂದು ಗುರುತಿಸಲು ಅಗಿಲ್ಲ. ಸಾಕ್ಷಿ ಪ್ರಕರಣದಲ್ಲಿ

ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮೂಲ ಪ್ರಕರಣದಲ್ಲಿ ಈಗಾಗಲೇ ಎಂ.ಓ-1 ರಿಂದ 4 ಎಂದು ಗುರುತಿಸಲಾಗಿದೆ. ಘಟನೆ ಸಮಯದಲ್ಲಿ ಆರೋಪಿತರು ಕೂಡ ಇದ್ದರು. ಘಟನೆಯಾದ ನಂತರ ಚಾಸಾ-1, 4 ಮತ್ತು 5 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆನಂತರ ಪೋಲಿಸ್ ಬಾತ್ಮಿದಾರರಿಂದ ಗಲಾಟೆ ಮಾಡಿದವರ ಹೆಸರು ವಿಳಾಸ ಗೊತ್ತಾಗಿರುತ್ತದೆ. ಈ ಕುರಿತು ಚಾಸಾ-1 ಪ್ರಕರಣ ದಾಖಲಿಸಿದ್ದು, ಘಟನೆ ಕುರಿತು ಹೇಳಿಕೆ ಹಾಗೂ ಪುರವಣಿ ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ಘಟನೆ ದಿವಸ ಅಂದಾಜು 500-ಜನರು ಮತ ಎಣಿಕೆ ಕೇಂದ್ರದ ಹತ್ತಿರ ಜಮಾಯಿಸಿದ್ದರು. ಕಲ್ಲನು ಯಾರು ಬೀಸಿರುತ್ತಾರೆಂದು ನಿಖರವಾಗಿ ಹೇಳಲು ಬರುವುದಿಲ್ಲ. ಘಟನೆ ದಿವಸ ಧ್ವನಿವರ್ಧಕ ಸರಿಯಾಗಿರದ ಬಗ್ಗೆ ಆರೋಪಿತರು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕಲ್ಲು ಬೀಸಿ ಹೊಡೆದಿರುತ್ತಾರೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಮೈಕಿನ ಸರಿಯಾದ ವ್ಯವಸ್ಥೆ ಮಾಡುವುದಾಗಿ ಚಾಸಾ-1 ಯಾರಿಗೆ ಹೇಳಿರುತ್ತಾರೆಂದು ನಿಖರವಾಗಿ ಹೇಳಲು ಬರುವುದಿಲ್ಲ.

ಘಟನೆ ದಿವಸ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-1, 4, 5 ರವರಿಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಚಾಸಾ-1 ನಮ್ಮ ಮೇಲಾಧಿಕಾರಿ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ